**ವ್ಯಾಖ್ಯಾನ**

# ಎನ್ನಮ್ಮ ಸಿರಿ ದೇವಿ

1. **Ref.**: Haridasa Taranga Part-2, Published by M/s. Vyaasaanandadasa Pratishtaana, Bengaluru-98, First Edition 2014, page No. 94.
2. **Author:** Pandith Parashuram Betageri, Bengaluru.

**ಶ್ರೀ ಪುರಂದರ ದಾಸರ ಉಗಾಭೋಗದ ಚಿಂತನೆ:**

ಎನ್ನಮ್ಮ ಸಿರಿದೇವಿ ಇನ್ನು ಅರಿಯಳು ಮಹಿಮೆ
ಕುನ್ನಿಮಾನವನು ನಾನೇನು ಬಲ್ಲೆನು
ಪನ್ನಗಾದ್ರಿನಿಲಯನೆ ಪಾವನ ಮೂರ್ತಿ ಕೃಷ್ಣ
ಎನ್ನನುದ್ಧರಿಸಯ್ಯ ಪುರಂದರವಿಠಲ ॥

ಪರಮಾತ್ಮನ ಮಹಿಮೆಯು ಅಪಾರ. ಆತನ ಕಲ್ಯಾಣಗುಣಗಳು ಅನಂತ. ಸದಾ ಕಾಲವೂ ಆತನೊಂದಿಗೆ ಇರುವಂತಹ ಮಹಾಲಕ್ಷ್ಮೀದೇವಿಯವರು ಆತನ ಮಹಿಮೆಯನ್ನು ಅರಿಯಲು ಅಸಮರ್ಥಳು. ನಿತ್ಯಮುಕ್ತಳೂ ನಿರ್ವಿಕಾರಳೂ ಆಗಿರುವ ರಮಾದೇವಿಯವರು ಪರಮಾತ್ಮನನ್ನು ಸಂಪೂರ್ಣವಾಗಿ ತಿಳಿಯಲು ಅಸಮರ್ಥರು. ಇನ್ನು ಅತ್ಯಲ್ಪ ಶಕ್ತಿಯುಳ್ಳವನೂ ಅನಾದಿ ಲಿಂಗದೇಹದಿಂದ ಬಂಧಿತನೂ ಆಗಿರುವ ಹುಲು ಮಾನವನಾದ ನನ್ನಿಂದ ಶ್ರೀಹರಿಯ ಮಹಿಮೆಯನ್ನೂ ಹೇಗೆ ತಿಳಿಯಲು ಸಾಧ್ಯ? ಅಪಾರ ಮಹಿಮನಾದ ಶ್ರೀಹರಿಯ ಸೇವೆಯನ್ನು ಲಕ್ಷ್ಮೀದೇವಿಯವರು ಅನಾದಿಕಾಲದಿಂದಲೂ ತಾವೇ ಸ್ವತಃ ಮಾಡುತ್ತಲಿದ್ದಾರೆ. ಅನೇಕ ಕೋಟಿ ಭೃತ್ಯರಿದ್ದರೂ ಸಹ ತಾನೇ ಸ್ವತಃ ನಿಂತಿದ್ದು ಶ್ರೀಹರಿಯ ಸೇವೆಯನ್ನು ಮಾಡುತ್ತಿದ್ದಾಳೆ. ಆದುದರಿಂದಲೇ “ಏನು ಧನ್ಯಳೋ ಲಕುಮಿ ಎಂಥಾ ಮಾನ್ಯಳೋ” ಎಂದು ಪುರಂದರದಾಸರು ಹೇಳಿದ್ದಾರೆ.

ಹರಿಕಥಾಮೃತಸಾರದ 32ನೆಯ ಕಕ್ಷತಾರತಮ್ಯ ಸಂಧಿಯಲ್ಲಿ ಮಹಾಲಕ್ಷ್ಮೀ ದೇವಿಯವರು ಶ್ರೀ ಹರಿಯ ಚಿಂತನೆ ಮಾಡುವ ಪರಿಯನ್ನು ಬಹುವಾಗಿ ವರ್ಣಿಸಿದ್ದಾರೆ. "ರೋಮ ಕೂಪಗಳೊಳು ಪೃಥಕ್ಪೃಥ । ಗಾ ಮಹಾಪುರುಷನ ಸುಮೂರ್ತಿಯ । ತಾಮರಸ ಜಾಂಡಗಳ ತದ್ಗತ ವಿಶ್ವರೂಪಗಳ ॥ ಶ್ರೀ ಮಹಿಳೆ ರೂಪಗಳ ಗುಣಗಳ । ಸೀಮೆಗಾಣದೆ ಯೋಚಿಸುತ ಮಮ । ಸ್ವಾಮಿ ಮಹಿಮೆಯ ದೆಂತುಟೆಂದಡಿಗಡಿಗೆ ಬೆರಗಾದ ॥" .... ತನ್ನ ಪತಿಯಾದ ಶ್ರೀಹರಿಯ ದೇಹದೊಳಗಿನ ಒಂದೊಂದು ರೋಮ ಕೂಪದಲ್ಲೂ ಭಗವನ್ಮೂರ್ತಿಗಳನ್ನೂ, ಬ್ರಹ್ಮಾಂಡಗಳನ್ನೂ, ಅದರಲ್ಲಿರುವ ವಿಶ್ವರೂಪಗಳನ್ನೂ, ಗುಣಗಳನ್ನೂ ಕಂಡು ಆಲೋಚಿಸುತ್ತ ಅದಕ್ಕೆ ಕೊನೆಗಾಣದೆ ತನ್ನ ಸ್ವಾಮಿಯ ಮಹಿಮೆ ಎಷ್ಟೆಂದು ಕ್ಷಣಕ್ಷಣಕ್ಕೆ ಮಹಾಲಕ್ಷ್ಮೀದೇವಿಯವರು ಬೆರಗಾಗುತ್ತಿರುವರು.

ಅಂತಹ ಅಪಾರ ಮಹಿಮನಾದ ಪನ್ನಗಾದ್ರಿನಿಲಯ (ಶೇಷಗಿರಿವಾಸ)ನಾದ ಶ್ರೀನಿವಾಸನೇ ಪಾವನಮೂರ್ತಿಯೇ ನನ್ನನ್ನು ಕಾಪಾಡು. "ನೀನೇ ಗತಿ ನೀನೇ ಮತಿ ವಿಠಲಾ" ಎಂಬ ದಾಸವಾಣಿಯು ಸಮಂಜಸವೆನಿಸುತ್ತದೆ. ಈ ಸಂದರ್ಭದಲ್ಲಿ

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** ಪಂ॥ ಶ್ರೀ ಪರಶುರಾಂ ಬೆಟಗೇರಿ